ವಸತಿ ಗೃಹ ತೆರವುಗೊಳಿಸುವುದು

494(677); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕೋಲಾರ ನಗರದ ಪೊಲೀಸ್ ಠಾಣೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಇನ್ಸ್‌ಪೆಕ್ಟರ್ ರವರು ಈ ಹಿಂದೆ ಬಂಗಾರಪೇಟೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ವಸತಿ ಗೃಹವನ್ನು ಪಡೆದಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಈ ಅಧಿಕಾರಿಯು ಬಂಗಾರಪೇಟೆಯಿಂದ ಕೋಲಾರಕ್ಕೆ ವರ್ಗಾವಣೆಗೊಂಡು 4 ತಿಂಗಳಾದರೂ ಈ ವಸತಿ ಗೃಹವನ್ನು ತೆರವುಗೊಳಿಸದಿರುವುದಕ್ಕೆ ಕಾರಣವೇನು?

ಇ) ಹಾಗಿದ್ದಲ್ಲಿ ಯಾವಾಗ ವಸತಿ ಗೃಹವನ್ನು ತೆರವು ಮಾಡಿಸಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಕೋಲಾರ ನಗರ ಪೊಲೀಸ್ ವೃತ್ತದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲಿಸ್ ಇನ್ಸ್‌ಪೆಕ್ಟರ್ ರವರು ಈ ಹಿಂದೆ ಬಂಗಾರಪೇಟೆಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಬಂಗಾರಪೇಟೆ ಪೊಲೀಸ್ ವಸತಿ ಗೃಹವನ್ನು ಪಡೆದಿರುವುದು ನಿಜ.

ಆ) ಬಂಗಾರಪೇಟೆಯಿಂದ ಕೋಲಾರಕ್ಕೆ ವರ್ಗಾವಣೆಗೊಂಡ ನಂತರ ವಸತಿ ಗೃಹದಿಂದ ಅವರನ್ನು ತೆರವುಗೊಳಿಸಲು ಡಿ.ವೈ.ಎಸ್.ಪಿ. – ಕೆ.ಜಿ.ಎಫ್. ರವರು ಕ್ರಮ ತೆಗೆದುಕೊಂಡಿರುತ್ತಾರೆ.

ಇ) ಕೂಡಲೇ ವಸತಿ ಗೃಹದಿಂದ ತೆರವುಗೊಳಿಸಲಾಗುವುದು.